**<u>ದಿನಾಂಕಃ 07.01.2025 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.</u>**
**<u>ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರ ವಕೀಲರಿಂದಃ</u>**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿನ ಎಲ್ಲಾ ವಿಷಯಗಳು ಸತ್ಯವಾಗಿದೆ.

ದಿಃ 27.12.2015 ರ ಕ್ರಯದ ಕರಾರು ಪತ್ರವನ್ನು ಪ್ರತಿವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ನಿಪಿಃ 1 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿಃ 1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿಃ1(ಎ) ಎಂದು ಗುರುತಿಸಲಾಯಿತು. ದಾವಾ ಸ್ವತ್ತಿಗೆ ಸಂಬಂಧಿಸಿದ 2 ಪಹಣಿ ಪತ್ರಿಕೆಗಳನ್ನು ನಿಪಿಃ 2 ಮತ್ತು ನಿಪಿಃ 3 ಎಂದು, ಮುನಿನಂಜಪ್ಪರವರ ವಂಶವೃಕ್ಷದ ದೃಢೀಕರಣ ಪತ್ರವನ್ನು ನಿಪಿಃ 4 ಎಂದು, ಪ್ರಮಾಣ ಪತ್ರದ ದೃ. ನಕಲನ್ನು ನಿಪಿಃ 5 ಎಂದು, ಮುನಿನಂಜಪ್ಪರವರ ಮರಣ ಪ್ರಮಾಣ ಪತ್ರವನ್ನು ನಿಪಿಃ 6 ಎಂದು ಗುರುತಿಸಲಾಯಿತು. ಮುನಿನಂಜಪ್ಪರವರ ಮಗಳ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ದಿಃ 15.07.1991 ರ ಕ್ರಯ ಪತ್ರದ ದೃ. ನಕಲನ್ನು ನಿಪಿಃ 7 ಎಂದು, ಎಂ. ಆರ್. ಸಂಖ್ಯೆ 6/1991-92 ರ ದೃ. ನಕಲನ್ನು ನಿಪಿಃ 8 ಎಂದು, ದಾವಾ ಸ್ವತ್ತಿಗೆ ಸಂಬಂಧಿಸಿದ 18 ಪಹಣಿ ಪತ್ರಿಕೆಗಳನ್ನು ನಿಪಿಃ 9 ರಿಂದ ನಿಪಿಃ 26 ಎಂದು, ಮುನಿನಂಜಪ್ಪರವರ ಕುಟುಂಬಕ್ಕೆ ಸಂಬಂಧಸಿದ ಗೇಣಿ ರಹಿತ ದೃಢೀಕರಣ ಪತ್ರವನ್ನು ನಿಪಿಃ 27 ಎಂದು, ಸ್ವತ್ತಿನ 2 ಋಣಭಾರ ರಹಿತ ಪತ್ರವನ್ನು ನಿಪಿಃ 28 ಮತ್ತು ನಿಪಿಃ 29 ಎಂದು, ದಾವಾ ಸ್ವತ್ತಿಗೆ ಸಂಬಂಧಿಸಿದ 2 ಪಹಣಿ ಪತ್ರಿಕೆಗಳನ್ನು ನಿಪಿಃ 30 ಮತ್ತು ನಿಪಿಃ 31 ಎಂದು, ಲೀಗಲ್ ನೋಟೀಸ್ ಅನ್ನು ನಿಪಿಃ 32 ಎಂದು, 3 ಅಂಚೆ ರಸೀದಿಗಳನ್ನು ಒಟ್ಟಾಗಿ ನಿಪಿಃ 33 ಎಂದು ಗುರುತಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ.ಕೇ. ಹೇ. ಸರಿ ಇದೆ.
ಸಹಿ/-
**(ದಯಾನಂದ)**
**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಲೂರು.**